ಇ) ಹಂಚಿಕೆಗೆ ಬಾಕಿ ಇರುವ ಭೂಮಿ 1,437.34 ಎಕರೆ.

ಫಲಾನುಭವಿಗಳ ಸಂಖ್ಯೆ:658 (ಸರ್ವೆ ನಂಬರ್‌ವಾರು ವಿವರಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಿ ಕೊಡಲಾಗುವುದು)

ಟಿ.ನರಸೀಪುರದಲ್ಲಿ ಇಂದಿರಾ ಆವಾಸ್ ಯೋಜನೆಯಲ್ಲಿ ಮಂಜೂರಾಗಿರುವ ಮನೆಗಳು.

2488(2862)

ಡಾ: ಭಾರತಿ ಶಂಕರ್(ಟಿ.ನರಸೀಪುರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಟಿ.ನರಸೀಪುರ ಟೌನ್ ಪಂಚಾಯತಿಗೆ 1996-97 ರಿಂದ 99-2000ರದವರೆಗೆ ಆಶ್ರಯ ಅಂಬೇಡ್ಕರ್, ಇಂದಿರಾ ಆವಾಜ್ ಯೋಜನೆಗಳನ್ನು ಮಂಜೂರಾಗಿರುವ ಮನೆಗಳ ಸಂಖ್ಯೆ ಎಷ್ಟು?

ಆ) ಎಷ್ಟು ಮನೆಗಳನ್ನು ವಿತರಿಸಲಾಗಿದೆ?

ಇ) ವಿತರಿಸದೇ ಉಳಿದಿರುವ ಮನೆಗಳ ಸಂಖ್ಯೆ ಎಷ್ಟು? ವಿತರಣೆ ಮಾಡದಿರುವುದಕ್ಕೆ ಕಾರಣಗಳೇನು? ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಈ) ಟಿ.ನರಸೀಪುರ ವಿಧಾನ ಸಭಾ ಕ್ಷೇತ್ರಕ್ಕೆ 98-99 ಮತ್ತು 99-2000ರ ಸಾಲಿನಲ್ಲಿ ಮಂಜೂರಾಗಿರುವ ಆಶ್ರಯ ಅಂಬೇಡ್ಕರ್ ಇಂದಿರಾ ಆವಾಜ್ ಯೋಜನೆ ಮನೆಗಳ ಸಂಖ್ಯೆ ಎಷ್ಟು?

ಉ) ವಿತರಣೆಯಾಗಿರುವ ಮನೆಗಳ ಸಂಖ್ಯೆ ಎಷ್ಟು? ವಿತರಣೆಯಾಗದಿರುವ ಮನೆಗಳ ಸಂಖ್ಯೆ ಎಷ್ಟು? (ವಾರ್ಷಿಕ ಮತ್ತು ಯೋಜನಾವಾರು ಸಂಖ್ಯೆ ನೀಡಿ)

ಊ) ಟಿ.ನರಸೀಪುರ ಪಟ್ಟಣದ ಯಾವ ಯಾವ ಪ್ರದೇಶಗಳನ್ನು ಕೊಳಚೆ ಪ್ರದೇಶಗಳೆಂದು ಸರ್ಕಾರ ಘೋಷಿಸಿದೆ, ಇನ್ನು ಘೋಷಣೆಯಾಗದ ಪ್ರದೇಶಗಳು ಯಾವುವು?

ಋ) ಈ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ? ಕೊಳಚೆ ಪ್ರದೇಶಗಳಲ್ಲಿ ಈವರೆಗೆ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳೇನು? ಈ ಕಾರ್ಯಗಳಿಗೆ ಈವರಗೆ ವ್ಯಯ ಮಾಡಿರುವ ಮೊತ್ತವೆಷ್ಟು? (1998-99 ಮತ್ತು 00-2000) ಕೊಳಚೆ

ಪ್ರದೇಶಗಳ ಅಭಿವೃದ್ಧಿಯ ಬಗ್ಗೆ ಯೋಜನೆಗಳೇನಾದರೂ ಸರ್ಕಾರದ ಮುಂದಿದೆಯೆ?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು):

ಅ) 170 ಮನೆಗಳು

ಆ) 10 ಮನೆಗಳು

ಇ) 160 ಮನೆಗಳು. ವಸತಿ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿರುವುದಿಲ್ಲ.

ಈ) ಗುರಿ ನಿಗಧಿಪಡಿಸಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ

ಊ) 1. ಇಂದಿರಾ ಕಾಲೋನಿ

2. ಪೌರಕಾರ್ಮಿಕರ ಕಾಲೋನಿ

3. ಲಾಲ್‌ಬಹದ್ದೂರ್ ಶಾಸ್ತ್ರಿ ಕಾಲೋನಿ

4. ವಿನಾಯಕ ಕಾಲೋನಿ

5. ಘೋಷಣೆಯಾಗದ ಕೊಳಚೆ ಪ್ರದೇಶಗಳು ಯಾವುದೂ ಇರುವುದಿಲ್ಲ.

ಋ) ಯಾವುದೇ ಪ್ರಸ್ತಾಪನೆ ಇರುವುದಿಲ್ಲ ಘೋಷಿತಗೊಂಡ ಈ ಕೊಳಚೆ ಪ್ರದೇಶಗಳಲ್ಲಿ ಚರಂಡಿ, ಅಡ್ಡಮೋರಿ, ಕಲ್ಲು ಕಟ್ಟಡ ಚರಂಡಿ, ರಸ್ತೆಗಳನ್ನು ನಿರ್ಮಿಸಲಾಗಿದೆ. ಒಟ್ಟು 14.91 ರೂ.ಲಕ್ಷಗಳು. ವರ್ಷವಾರು ಆಯವ್ಯಯದಲ್ಲಿ ಹಣದ ಲಭ್ಯತೆಗನುಗುಣವಾಗಿ ಪ್ರತಿ ನಗರ ಪಟ್ಟಣ ಕೊಳಚೆ ಪ್ರದೇಶಗಳ ಜನಸಂಖ್ಯೆಯನ್ನು ಆಧರಿಸಿ ಹಂತಹಂತವಾಗಿ ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಸಿಂದಗಿ ತಾಲ್ಲೂಕಿನಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಯೋಜನೆ ಅಡಿಯಲ್ಲಿ ರಸ್ತೆ ನಿರ್ಮಾಣ.

2628(2097)

Sri Sunagara Sharanappa Thippanna (Sindagi): ಈ ಕೆಳಕಂಡ